**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 100/2018.**

**ಸಿ.ಡಬ್ಲ್ಯೂಃ–6 ಪಿ.ಡಬ್ಲ್ಯೂಃ–4**

**ದಿಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ನಿಂಗಪ್ಪಾ ಕೆಂಚಪ್ಪಾ ಹರಕೆ |
| ವಯಸ್ಸು | : | 60 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಜೋಡಕುರಳಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ನನ್ನ ತಮ್ಮ.

2) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

3) ಸನ್ 2014 ನೇ ಸಾಲಿನಲ್ಲಿ ಸಂಜೆ 05.00 ರಿಂದ 05.30 ಗಂಟೆ ಸುಮಾರಿಗೆ ಜೋಡಕುರಳಿ ಗ್ರಾಮದ ನಮ್ಮ ಹೊಲದಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯುತ್ತಿದ್ದಾಗ ಆರೋಪಿತರೆಲ್ಲರೂ ಬಂದು ಕಟ್ಟಿಗೆ ಮತ್ತು ಕಲ್ಲು ತೆಗೆದುಕೊಂಡು ಬಂದು ಹೊಡೆಯಲು ಆರಂಭಿಸಿದರು. ನನಗೂ ಕೂಡಾ ಆರೋಪಿತರೆಲ್ಲಾ ಹೊಡೆದರು. ನನ್ನ ಜೊತೆ ಉಳಿದವರಿಗೂ ಕೂಡಾ

ಹೊಡೆದರು. ಗಳೆ ಯಾಕೆ ಹೊಡಿತೀರಿ ಅಂತಾ ನಮಗೆ ಹೊಡೆದರು. ನಂತರ ದವಾಖಾನೆಗೆ ಬಂದೇವು. ಕಂಪ್ಲೆಂಟ್ ಕೊಟ್ಟೇವು.

4) ಆರೋಪಿತರು ಬಡಿದ ಬಡಿಗೆಗಳನ್ನು ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಮು.ಮಾ.1 ರಿಂದ 19 ತೋರಿಸಲಾಗಿ ಅವುಗಳಿಂದಲೇ ಆರೋಪಿತರು ಬಡಿದಿದ್ದಾಗಿ ಗುರುತಿಸುತ್ತಾರೆ.

5) ಆರೋಪಿತರಿಗೆ ನಾವು ಯಾರ ಕಡೆಯಿಂದಲೂ ಬುದ್ದಿಮಾತು ಕೇಳಿರಿಸಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಮನೆಯ ಮುಂದಿರುವ 10 ಎಕರೆ ಜಮೀನು ವಿಚಾರವಾಗಿ ನಮಗೆ ಹಾಗೂ ಆರೋಪಿತರಿಗೆ ಬಹಳ ವರ್ಷಗಳಿಂದ ಜಗಳ ಇತ್ತು ಎಂದರೆ ಸರಿ.

2) ದಿನಾಂಕಃ 20.04.2014 ರಂದು ಸಂಜೆ 05.00 ಗಂಟೆ ಸುಮಾರಿಗೆ

ನಮ್ಮ ಪಾಲಿಗೆ ಬಂದ ಜಮೀನದಲ್ಲಿ ನಾವು ಗಳೆ ಹೊಡೆಯುತ್ತಿದ್ದಾಗ 3ನೇ ಆರೋಪಿ ಬಂದು ಗಳೆ ಹೊಡೆಯಬೇಡಿರಿ ಅಂತಾ ಹರಕತ ಮಾಡಿದ ಎಂದರೆ ಸರಿ. ಆ ಕಾಲಕ್ಕೆ ನಾನು ಚಾ.ಸಾ.12 ಮತ್ತು 13 ರವರನ್ನು ಕರೆಸಿ ಬುದ್ದಿವಾದ ಹೇಳಿಸಿದೇವು ಎಂದರೆ ನನಗೆ ಗೊತ್ತಿಲ್ಲ. ಆ ಹಿರಿಯರ ಮಾತು ಕೇಳದೇ ಆರೋಪಿತರು ಕೈಯಲ್ಲಿ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ನಮಗೆ ಹೇಳದೇ ಕೇಳದೇ ಗಳೆ ಹೊಡೆಯುತ್ತಿದ್ದೀರಿ ಅಂತಾ ಅಂದರು ಎಂದರೆ ಸರಿ. ಆ ಕಾಲಕ್ಕೆ ಸೂಳೆಮಕ್ಕಳಾ , ಬೋಸಡಿಮಕ್ಕಳಾ ಅಂತಾ ಅವಾಚ್ಯವಾಗಿ ಆರೋಪಿತರು ನಮಗೆ ಬೈದರು ಎಂದರೆ ಸರಿಯಲ್ಲ. ನಮ್ಮನ್ನು ಕೊಲ್ಲುವ ಸಲುವಾಗಿ ನನಗೀಗ ತೋರಿಸಿದ ಮು.ಮಾ.1 ರಿಂದ 15 ಬಡಿಗೆಗಳಿಂದ ನಮಗೆಲ್ಲಾ ಹೊಡೆದರು ಹಾಗೂ ನನಗೀಗ ತೋರಿಸಿದ ಮು.ಮಾ.16 ರಿಂದ 19 ಕಲ್ಲುಗಳಿಂದ ನಾವು ಕೆಳಗೆ ಬಿದ್ದ ಮೇಲೆ ನಮ್ಮ ಮೇಲೆ ಎಸೆದರು ಎಂದರೆ ಸರಿ. ಆಗ ನಮಗಾದ ಗಾಯಗಳಿಗೆ ನಾವು ಚಿಕ್ಕೋಡಿ ಆಸ್ಪತ್ರೆಗೆ ಬಂದು ತೋರಿಸಿಕೊಂಡು ನಂತರ ಚರಾಟೆ ಆಸ್ಪತ್ರೆಯಲ್ಲಿ ಉಪಚಾರಗೊಂಡೇವು ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ-</u> 2, 4, 7, 9, 11 ರಿಂದ 14 ಮತ್ತು 16 ನೇ ಆರೋಪಿತರ ಪರಃ ಶ್ರೀ ಎಸ.ಎಸ.ಡಿ.ವಕೀಲರಿಂದ** :

1) ನಾನು ಶಾಲೆ ಕಲಿತಿಲ್ಲ. ನಮ್ಮ ಮತ್ತು ಆರೋಪಿತರ ಮದ್ಯೆ ಇದ್ದ

ಜಮೀನಿನ ವಿಚಾರವಾಗಿ ಅಪಸಾತಿಯಾಗಿ ಲೋಕ ಅದಾಲತನಲ್ಲಿ ಪ್ರಕರಣ ಮುಗಿದಿದೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು 5 ಎಕರೆ 2 ಗುಂಟೆ ಹಾಗೂ ಆರೋಪಿತರು 5 ಎಕರೆ 2 ಗುಂಟೆ ಜಮೀನದಲ್ಲಿ ಪ್ರತ್ಯೇಕ ವಹಿವಾಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2) ನಾವು ಆರೋಪಿತರ ಖೊಟ್ಟಿ ಸಹಿ ಮಾಡಿ ಬ್ಯಾಂಕಿನಿಂದ ಸಾಲ ಪಡೆದಿದ್ದೇವು ಹಾಗೂ ಜೈಲಗೆ ಹೋಗಿದ್ದೇವು ಎಂದರೆ ಸರಿಯಲ್ಲ. ಆ ರೀತಿ ಜೈಲಿನಲ್ಲಿ ಬಂದು ಬಿದ್ದ ಮೇಲೆ ಸಿದ್ದಪ್ಪನ ಹೆಂಡತಿ ಕಡೆಯಿಂದ ಜಾತಿನಿಂದನೆ ಪ್ರಕರಣ ಕೊಟ್ಟಿದ್ದೇವು ಎಂದರೆ ಸರಿ. ಆ ಪ್ರಕರಣದಲ್ಲಿ ಆರೋಪಿತರನ್ನು ಖುಲಾಸೆ ಮಾಡಲಾಗಿದೆ ಎಂದರೆ ಸರಿ.

3) ಜಗಳ ಮನೆಯಿಂದ ಸುಮಾರು 40 ಅಡಿ ದೂರದಲ್ಲಿ ಮನೆಯ ಎಡಭಾಗದಲ್ಲಿ ಹೊಲದಲ್ಲಿ ಆಯಿತು. ನಮ್ಮ ಮನೆ ಮುಂದೆ ಆರೋಪಿತರ ಮನೆ ಇದೆ ಎಂದರೆ ಸರಿ.

4) ಟ್ರ್ಯಾಕ್ಟರನಿಂದ ಗಳೆ ಹೊಡೆಯಲು ಸಾಯಂಕಾಲ 04.45 ಗಂಟೆಗೆ ಶುರು ಮಾಡಿದ್ದೇವು. ಆಗ ಆರೋಪಿತರು ಬಂದು ಹರಕತ ಮಾಡಲಿಲ್ಲ ಎಂದರೆ ಸರಿ. ಸುಮಾರು 15 ಗುಂಟೆಯಷ್ಟು ಪೂರ್ವ–ಪಶ್ಚಿಮ ಗಳೆ ಹೊಡೆದಿದ್ದೇವು. ಟ್ರ್ಯಾಕ್ಟರನ್ನು ಕೆಂಚಪ್ಪಾ ಶಿವಪ್ಪಾ ಹರಕೆ ಹೊಡೆಯುತ್ತಿದ್ದ. ಕೆಂಚಪ್ಪಾ ಶಿವಪ್ಪಾ ಹರಕೆ ಟ್ರ್ಯಾಕ್ಟರ ತೆಗೆದುಕೊಂಡು ನಮ್ಮ ಹೊಲಕ್ಕೆ ಬಂದಿಲ್ಲ ಹಾಗೂ ಗಳೆ ಹೊಡೆದಿಲ್ಲ ಎಂದರೆ ಸರಿಯಲ್ಲ.

5) ಪೋಲಿಸರಿಗೆ ಬೀರಪ್ಪಾ ಹಾಲಪ್ಪಾ ಖದ್ದಿ ಲಕ್ಕಪ್ಪಾ ಹಾಲಪ್ಪಾ ಖದ್ದಿ ರವರು ನನಗೆ ಬಡಿದಿದ್ದಾರೆ ಅಂತಾ ಹೇಳಿಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಡಿ. 3 ಅಂತಾ ಗುರುತಿಸಲಾಯಿತು.

6) ಆರೋಪಿತರು ಹೊಲದಿಂದ ಬಡಿದುಕೊಳ್ಳುತ್ತಾ ಮನೆ ಒಳಗೆ ಬಂದು ನನಗೆ ಬಡಿದರು. ಆರೋಪಿತರ ಪೈಕಿ ಯಾರ್ಯಾರು, ಯಾವ ಯಾವ ಆಯುಧದಿಂದ ನನಗೆ ಎಲ್ಲಿ ಎಲ್ಲಿ ಹೊಡೆದರು ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿ . ಆರೋಪಿತರು ಮನೆಯವರೆಗೆ ಬಡಿಯುತ್ತಾ ಬಂದರು ಅಂತಾ ಮೊದಲು ಬಾರಿಗೆ ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ನನಗೆ ಪ್ರಜ್ಞೆ ಮಾರನೇ ದಿನ ಬಂತು. ನನಗೆ ಆ ರೀತಿ ಪ್ರಜ್ಞೆ ಬರುವವರೆಗೆ ನನ್ನನ್ನು ಎಲ್ಲಿ ಕರೆದುಕೊಂಡು ಹೋದರು, ಎಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟರು ಅಂತಾ ಗೊತ್ತಿರಲಿಲ್ಲ ಎಂದರೆ ಸರಿ. ಜಗಳ ಮನೆಯಿಂದ ಸುಮಾರು 50 – 60 ಅಡಿ ದೂರದಲ್ಲಿ ಹೊಲದಲ್ಲಿ ಆಯಿತು.

8) ನನ್ನ ಮೈಮೇಲೆ ರಕ್ತ ಬಿದ್ದಿರಲಿಲ್ಲ. ನನಗೆ ಯಾವುದೇ ಗಾಯಗಳಾಗಿಲ್ಲ.

9) ನಮ್ಮ ಎಲ್ಲಾ ಜಮೀನು ಮಾರಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಡ್ಡಿಯಂತೆ ಹಾಕಿದ್ದೇವೆ ಎಂದು ನುಡಿಯುತ್ತಾರೆ.

10) ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಹೊಲಕ್ಕೆ ಬಂದಿಲ್ಲ, ನನ್ನೊಂದಿಗೆ ಯಾವುದೇ ಜಗಳ ತೆಗೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಮಾಡುವ ಉದ್ದೇಶದಿಂದ ಮು.ಮಾ.1 ರಿಂದ 19 ನೇದ್ದವುಗಳನ್ನು ಬಳಸಿ ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಹಾಗೂ ಕೊಲೆ ಮಾಡುವ ಪ್ರಯತ್ನ ಮಾಡಿಲ್ಲ, ನಮಗೆ ಹೊಡೆಬಡೆ ಮಾಡಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹೊಲ ಇಲ್ಲದೇ ಇದ್ದ ಕಾರಣ ಹೇಗಾದರೂ ಮಾಡಿ ಹೊಸದಾಗಿ ಹೊಲ ಕಿತ್ತುಕೊಳ್ಳಲು ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.